* *Restoration of Tanks in Kolar Taluk*

597. SRI C. BYREGOWDA (Vemagal).—Will the Minister of State for Minor Irrigation be pleased to state:—

(*a*) the number of tanks in Kolar taluk where they leakages in bund were noticed during the last two rain seasons, the names of such tanks;

(*b*) when those tanks were restored last (details in all the cases may be given);

(*c*) the reasons for the leakages?

SRI S. B. NAGARAL (Minister of State for Minor Irrigation.—

(*a*) 22 tanks (Statement I placed on the Table of the House)*

(*b*) 3 tanks restored during 1973—74

9 tanks restored during 1974—75 (Statement II placed on the Table of the House) Remaining 10 tanks not restored.*

(*c*) Due to removal of old tree roots, trunks (Crabs, rats making holes, when the tanks dried) and as also due to sweating and gradual Saturation and erosion of the soil.

ಶ್ರೀ ಸಿ. ಬೈರೇಗೌಡ:—ಸ್ವಾಮಿ, ತಾವು ಎರಡು ಪಟ್ಟಿಗಳನ್ನು ಕೊಟ್ಟಿದ್ದೀರಿ. ರೆಸ್ಟೊರೇಷನ್ ಎನ್ನುವುದಕ್ಕೆ ಡೆಫನಿಷನ್ ಏನು? ಮತ್ತು ರಿಪೇರ್ಸ್ ಎನ್ನುವುದಕ್ಕೆ ಡೆಫನಿಷನ್ ಏನು ಎನ್ನುವುದನ್ನು ದಯವಿಟ್ಟು ತಿಳಿಸುತ್ತೀರಾ?

ಶ್ರೀ ಎಸ್. ಬಿ. ನಗರಾಳ್:—ಡೆಫನಿಷನ್ ಕೊಡುವುದಕ್ಕಿಂತಲೂ ಈಗ ನಿಮಗೆ ಅಲ್ಲಿ ಕೆರೆಗಳ ದುರಸ್ತಿಯಾಗಿ ಅಲ್ಲಿಯ ಜನಗಳಿಗೆ ನೀರು ಸಿಗಬೇಕು ಎನ್ನು

* Copy placed in the Karnataka Legislative Library *vide* No. 42, dated 27-3-75.

ವುದು ಮುಖ್ಯವಾದುದು. ಆದಕ್ಕೆ ಏನು ಕಾರ್ಯಕ್ರಮವನ್ನು ತೆಗೆದು ಕೊಂಡಿದ್ದೀವೆನ್ನುವುದಕ್ಕೆ ಉತ್ತರ ಕೊಟ್ಟಿದ್ದೀನೆ.

ಶ್ರೀ ಸಿ. ಬೈರೇಗೌಡ:—ಮಾನ್ಯ ಅಧ್ಯಕ್ಷರೇ, ದಯವಿಟ್ಟು ರೆಸ್ಟೋರೇಷನ ಎಂದರೆ ಏನು, ರಿಪೇರಿ ಎಂದರೆ ಏನು ಎನ್ನುವುದನ್ನು ದಯವಿಟ್ಟು ತಿಳಿಸಬೇಕು. ರೆಸ್ಟೋರೇಷನ್ನಿನ ಅಂಕಿಅಂಶಗಳನ್ನು ಕೊಟ್ಟಿದ್ದಾರೆ. ಏತಕ್ಕೆಂದರೆ ಕೆರೆಗಳ ಕೆಲಸ ಗಳನ್ನು ಮಾಡಿದ್ದರೂ ಕೂಡ ನೀರು ಸೋರಿಹೋಗಿ ಬಹಳ ತೊಂದರೆಯಾಗುತ್ತದೆ. ಆದುದರಿಂದ ತಾವು ಈ ವಿಷಯದ ಬಗ್ಗೆ ಸ್ಪಷ್ಟವಾಗಿ ತಿಳಿಸಬೇಕು. ತಪ್ಪು ಮಾಹಿತಿಯನ್ನು ಅಧಿಕಾರಿಗಳು ನಿಮಗೆ ಒದಗಿಸಿದ್ದಾರೆ. ಆದುದರಿಂದ ನಾನು ಕೇಳುತ್ತಿದ್ದೇನೆ.

ಶ್ರೀ ಎಸ್. ಬಿ. ನಗರಾಳ್:—ತಪ್ಪು ಮಾಹಿತಿ ಇಲ್ಲ, ಏನೂ ಇಲ್ಲ. ರೆಸ್ಟೋರೇಷನ್ ಎಂದರೆ ಲೀಕೇಜ್ ಎಲ್ಲಿ ಆಗಿರುತ್ತದೆಯೋ ಆಲ್ಲಿ ನೀರು ಹೊರಗಡೆ ಹೋಗಿ ತೊಂದರೆಯಾಗುತ್ತಿರುತ್ತದೆ, ತಮ್ಮ ಅಭಿಪ್ರಾಯದಂತೆ ಆ ಒಂದು ಲೀಕೇಜ್‌ನ್ನು ತಪ್ಪಿಸಿ ಮೊದಲಿನ ಪರಿಸ್ಥಿತಿಯಂತೆ ರಿಸ್ಟೋರೇಷನ್ ಮಾಡುವುದೇ ಅದರ ಅಭಿಪ್ರಾಯವಾಗುತ್ತದೆ.

ಶ್ರೀ ಸಿ. ಬೈರೇಗೌಡ:— 3-4-1973 ರಲ್ಲಿ 3 ಕೆರೆಗಳನ್ನು ರೆಸ್ಟೋರೇಷನ್ ಮಾಡಿದ್ದೀವೆಂದು ಹೇಳಿದ್ದೀರಿ ಆದರೆ ಪುನಃ ಲೀಕೇಜ್ ಹೇಗೆ ಬಂತು ?

ಶ್ರೀ ಎಸ್. ಬಿ. ನಗರಾಳ್.— ದುರಸ್ತಿ ಮಾಡಿದ್ದು ಎರಡು ಹಂತದಲ್ಲಿ ಮೊದಲನೆಯ ಹಂತದಲ್ಲಿ ಮಾಡಿದ್ದು 3 ಕೆರೆಗಳನ್ನು ಅದು 1973-74 ರಲ್ಲಿ, ಎರಡನೆಯದು 1974-75 ರಲ್ಲಿ ಮಾಡಿದೆ. ಒಟ್ಟು 12 ಕೆರೆಗಳು ಅವುಗಳನ್ನು ದುರಸ್ತಿ ಮಾಡಿ ಎಂದು ಹೇಳಿದ್ದೇವೆ. ದುರಸ್ತಿ ಕೆರೆಗಳಲ್ಲಿ ಏನಾದರೂ ಲೀಕೇಜ್ ಇದ್ದರೆ ರಿಪೇರಿ ಮಾಡಲು ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದು ಕೊಳ್ಳಲು ಹೇಳಿದ್ದೇವೆ. ಉಳಿದ ಕೆರೆಗಳನ್ನು ಸಹ ದುರಸ್ತಿ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಸಿ. ಬೈರೇಗೌಡ;— ವರ್ಷೇ ವರ್ಷೇ ರಿಸ್ಟೋರೇಷನ್ ಮಾಡುತ್ತಿರು ತ್ತಾರೆ, ವರ್ಷೇ ವರ್ಷೇ ನೀರು ಸೋರಿ ಹೋಗುತ್ತಿರುತ್ತದೆ. ನಾನು ಕೇಳುತ್ತಿರು ವುದು ಇದನ್ನು ನೋಟೀಸ್ ಮಾಡುವುದಕ್ಕಿಂತ ಮುಂಚೆ ಯಾವಾಗ ರಿಪೇರಿ ಮಾಡಿದ್ದರು ಎಂಬುದನ್ನು ತಿಳಿಸಬೇಕು.

ಶ್ರೀ ಎಸ್. ಬಿ. ನಗರಾಳ್ —ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ಕೆರೆಗಳ ಗುಣಧರ್ಮ, ಅನಿವಾರ್ಯ ಕಾರಣಗಳಿಂದಾಗ ಅನಿರೀಕ್ಷಿತವಾಗಿ ಕೆರೆ ಲಿಕೇಜ್ ಆಗುವಂಥಾದ್ದು ಸ್ವಾಭಾವಿಕ. ಹೀಗೆ ಏನು ಲಿಕೇಜ್ ಆಗುತ್ತದೆ ಅದನ್ನು ವರ್ಷೇ ವರ್ಷೇ ಸಾಧ್ಯವಾದಷ್ಟು ಅದನ್ನು ದುರಸ್ತಿ ಮಾಡಿ, ಮೊದಲಿನ ಕ್ಯಾಪಾಸಿಟಿಯಲ್ಲಿ ಕೆರೆಯಲ್ಲಿ ನೀರು ನಿಲ್ಲುವಂತೆ ರಿಪೇರಿ ಮಾಡಿಸುವುದಕ್ಕೆ ಸರ್ಕಾರದವರು ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತಿದೆ.

ಶ್ರೀ ಸಿ. ಬೈರೇಗೌಡ—ಕೆರೆಯನ್ನು ಹಿಂದೆ ಯಾವಾಗ ರಿಪೇರಿ ಮಾಡಿದ್ದರು ಎನ್ನುವುದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಹೇಳಲಿಲ್ಲ. ಆದುದರಿಂದ ದಯವಿಟ್ಟು ಸರಿಯಾದ ಉತ್ತರವನ್ನು ಕೊಡುವ ಹಾಗೆ ತಾವು ಹೇಳಬೇಕು.

ಅಧ್ಯಕ್ಷರು.—ಕೆರೆಗಳ ಗುಣಧರ್ಮಕ್ಕೆ ಅನುಗುಣವಾಗಿ ಯಾವಾಗ ಬೇಕಾದರೂ ಲೀಕೇಜ್ ಆಗುತ್ತದೆಂದು ಆಗಲೇ ಹೇಳಿದರು.

ಶ್ರೀ ಸಿ. ಬೈರೇಗೌಡ.—ವರ್ಷ್ ವರ್ಷ್ ಅವರು ರಿಪೇರಿ ಮಾಡಿಸುತ್ತಿರುತ್ತಾರೆ, ಆದರೆ ಅಲ್ಲಿ ಲೀಕೇಜ್ ಆಗುತ್ತಲೇ ಇರುವುದರಿಂದ. ಇದರಿಂದ ರೈತರಿಗೆ ಬಹಳ ತೊಂದರೆಯಾಗುತ್ತದೆ. ಜೊತೆಗೆ ಅವರ ಮೇಲೆ ಬರ್ಡನ್ ಆಫ್ ಮೆಂಟ್ ಲೆವಿಯನ್ನು ಸಹ ಹಾಕುತ್ತಿದ್ದೀರಿ, ರೈತರ ಹಿತದೃಷ್ಟಿಯಿಂದ ನಾವು ಈ ಪ್ರಶ್ನೆಯನ್ನು ಕೇಳುತ್ತಿರುವುದರಿಂದ ತಾವು ಸರಿಯಾಗಿ ಉತ್ತರವನ್ನು ಕೊಡಬೇಕು.

ಶ್ರೀ ಎಸ್. ಬಿ. ನಗರಾಳ್ :—ಉತ್ತರ ಸರಿಯಾಗಿಯೇ ಹೇಳಿದ್ದೇನೆ. ಮನಸ್ಸು ಮಾಡಿದರೆ ಎಲ್ಲಾ ತಿಳುವಳಿಕೆಗೆ ಬರುತ್ತದೆ. ಈಗ ಲಿಕೇಜ್ ಎಲ್ಲಿ ಆಗಿದೆಂದು ತಿಳುವಳಿಕೆಗೆ ಬಂದಿತೋ ಅಲ್ಲೆಲ್ಲಾ ದುರಸ್ತಿ ಮಾಡಿಸಿ, ಮೊದಲಿನಂತೆ ಒರಿಜನಲ್ ಪರಿಸ್ಥಿತಿಯಲ್ಲಿಯಂತೆ ಅಲ್ಲಿ ನೀರನ್ನು ರೆಸ್ಟೋರ್ ಮಾಡಿದ್ದೇವೆಂದು ಉತ್ತರ ಕೊಟ್ಟಿದ್ದೇನೆ.

ಶ್ರೀ ಕೆ. ಹೆಚ್. ಹನುಮೇಗೌಡ :—ಸ್ವಾಮಿ, ಇವರು ಲಿಕೇಜ್‌ನ್ನು ಸರಿಪಡಿಸುವಾಗ ಸರಿಯಾಗಿ ಕೆಲಸ ಮಾಡಿರುವುದಿಲ್ಲ, ಅದು ಮಳೆ ಬಂದಾಗ ಎಲ್ಲಾ ಕೊಚ್ಚಿಕೊಂಡು ಹೋಗಿ ಪುನಃ ಲೀಕ್ ಆಗುತ್ತಿರುತ್ತದೆ. ಅದಕ್ಕೆ ಪುನಃ ಮತ್ತೆ ರಿಪೇರಿ ಮಾಡಬೇಕಾಗಿ ಬರುತ್ತದೆ. ಅದಕ್ಕಾಗಿ ಮಾನ್ಯ ಸದಸ್ಯರು ಕೇಳುತ್ತಿರುವುದು ಇದಕ್ಕಿಂತಲೂ ಮೊದಲು ಯಾವಾಗ ರೆಸ್ಟೋರೇಷನ್ ಮಾಡಿದ್ದೀರಿ ಎಂದು ಕೇಳುತ್ತಿದ್ದಾರೆ ಅದಕ್ಕೆ ದಯವಿಟ್ಟು ಉತ್ತರವನ್ನು ಕೊಡಬೇಕು.

ಶ್ರೀ ಎಸ್. ಬಿ. ನಗರಾಳ್ —ಪುನಃ ಲಿಕೇಜ್ ಆಗಿರತಕ್ಕಂಥದ್ದು ಸರ್ಕಾರದ ಗಮನಕ್ಕೆ ಬಂದಾಗ ಅದರ ದುರಸ್ತಿ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಸ್ವಾಮಿ (ಎ) ಪ್ರಶ್ನೆಗೆ ಉತ್ತರವಾಗಿ 22 ಟ್ಯಾಂಕ್ಸ್ ಎಂದು ಉತ್ತರ ಕೊಟ್ಟಿದ್ದಾರೆ. ಎರಡು ವರ್ಷಗಳಿಗಿಂತ ಮುಂಚೆ ಯಾವಾಗ ಕೆರೆಗಳನ್ನು ರಿಪೇರಿ ಮಾಡಿದ್ದೀರಿ ಎನ್ನುತಕ್ಕಂಥದ್ದೇ ಈಗ ಬೇಕಾಗಿರ ತಕ್ಕಂಥ ಉತ್ತರ.

ಶ್ರೀ ಎಸ್. ಬಿ. ನಗರಾಳ್.—ಅಂಥದ್ದು ನೋಟೀಸ್ ಮೂಡಿದ ತಕ್ಷಣವೇ ಕ್ರಮ ತೆಗದುಕೊಂಡಿದ್ದೇವೆಂದು ಈಗಾಗಲೇ ಉತ್ತರ ಕೊಟ್ಟಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ.— ನೋಟೀಸ್ ಮೂಡುವುದಕ್ಕೆ ಮುಂಚೆ ಯಾವಾಗ ರಿಪೇರಿ ಮೂಡಲಾಗಿತ್ತು ಎಂದು ಕೇಳುತ್ತಿದ್ದಾರೆ ಅದಕ್ಕೆ ತಾವು ಉತ್ತರವನ್ನು ಹೇಳಬೇಕು.

ಶ್ರೀ ಎಸ್. ಬಿ. ನಗರಾಳ್ :—ಹಿಂದೆ ಈ ಕೆರೆಗಳನ್ನು ಯಾವಾಗ ರಿಪೇರಿ ಮೂಡಿದ್ದು ಎನ್ನುವ ಸಮಾಚಾರ ನನ್ನ ಹತ್ತಿರ ಇಲ್ಲ. ಈಗ ಲೀಕೇಜ್ ಆಗಿದ್ದು ದನ್ನು ರಿಪೇರಿ ಮೂಡಿದ್ದೇವೆ.

1-30 P. M.

SRI KAGODU THIMMAPPA.—That is the relevant question. The second part of the question is to elicit that information only. ನೀವು ಎರಡು ವರ್ಷದ ಅವಧಿಯಲ್ಲಿ ಎಷ್ಟು ಕೆರೆಗಳನ್ನು ರಿಪೇರಿ ಮೂಡಿದ್ದೀರಿ ಎನ್ನುವುದನ್ನು ಹೇಳಿದ್ದೀರಿ.

SRI S. B. Nagaral.—Question (b) is, when those tanks were restored last (details in all the cases may be given); ಎಷ್ಟು ಕೆರೆಗಳ ರಿಪೇರಿ ಮೂಡಿದ್ದೇವೆ ಎನ್ನುವುದನ್ನು ಉತ್ತರದಲ್ಲಿ ಹೇಳಿದೆ.

ಶ್ರೀ ಕಾಗೋಡು ತಿಮ್ಮಪ್ಪ.— ಕೆರೆಗಳ ರಿಪೇರಿಯನ್ನು ನೋಟೀಸ್ ಮೂಡುವುದಕ್ಕೆ ಮುಂಚೆ ಯಾವಾಗ ರಿಪೇರಿ ಮೂಡಿದ್ದೀರಿ ?

ಶ್ರೀ ಕೆ. ಟಿ. ರಾಥೋಡ್.—ಕೆರೆಗಳ ರಿಪೇರಿಯನ್ನು ನೋಟೀಸ್ ಮೂಡುವುದಕ್ಕೆ ಮುಂಚೆ ಅವುಗಳನ್ನು ರಿಪೇರಿ ಮೂಡುವ ಸನ್ನಿವೇಶ ಇರಲಿಲ್ಲ. ನೊಟೀಸ್ ಮೂಡುವ ಮೊದಲು ಕೆರೆಗಳ ಕೆಲಸವನ್ನು ಮಾಡಿಲ್ಲ.